ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
**Sri Jayadeva Institute of Cardiovascular Sciences and Research**
(Govt. of Karnataka Run Autonomous Institute)
Bannerghatta Road, Jayanagar 9th Block, Bengaluru – 560 069
Direct line: 080-22977456 Contact No.: 080-22977422/433
Email Id: drcnmanjunath@gmail.com
Website: www.jayadevacardiology.com

**DR. C. N. MANJUNATH**
**MD.DM, FICC, FACC,FRCP**
**Professor of Cardiology & Director**

Ref: Date:

ಉಲ್ಲೇಖ: ಎಸ್‌ಜೆಐಸಿಎಸ್‌ಅಂಡಆರ್/ನಿ.ಆಪ್ತಶಾಖೆ/೨೦೨೩–೨೦೨೪ ದಿನಾಂಕ: ೧೮.೧೦.೨೦೨೩

## <u>ಪತ್ರಿಕಾ ಪ್ರಕಟಣೆ</u>

## <u>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಐಸಿಐಸಿಐ ಫೌಂಡೇಶನ್ ವತಿಯಿಂದ 2ಡಿ ಕಲರ್ ಡಾಪ್ಲರ್ ಎಕೊ ಕಾರ್ಡಿಯೋಗ್ರಫಿ ಉಪಕರಣ ದೇಣಿಗೆ</u>

ಐಸಿಐಸಿಐ ಫೌಂಡೇಶನ್ ವತಿಯಿಂದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಸುಮಾರು 70 ಲಕ್ಷ ಬೆಲೆ ಬಾಳುವ 2ಡಿ ಕಲರ್ ಡಾಪ್ಲರ್ ಎಕೊ ಕಾರ್ಡಿಯಾಗ್ರಫಿ ಉಪಕರಣವನ್ನು ದೇಣಿಗೆಯಾಗಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆ ಬಳಿಕ ಮಾತಾನಾಡಿದ ವೈದ್ಯಕೀಯ ಶಿಕ್ಷಣ ಸಚಿವರು ಜಯದೇವ ಆಸ್ಪತ್ರೆಯ ಕಾರ್ಯವೈಖರಿ ಮತ್ತು ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಜಯದೇವ ಆಸ್ಪತ್ರೆ ರಾಜ್ಯದಲ್ಲಿ ಅಷ್ಟೇ ಅಲ್ಲ ರಾಷ್ಟ್ರದಲ್ಲೇ ಎಲ್ಲಾ ಆಸ್ಪತ್ರೆಗಳಿಗೂ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿದಿನ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಜಾಸ್ತಿ ಆಗಿದ್ದು, ವೈದ್ಯರು ಹಾಗೂ ಸಿಬ್ಬಂದಿಗಳ ಮೇಲೆ ಒತ್ತಡ ಹೆಚ್ಚಾಗಿದೆ. ಆದರೂ ಎಲ್ಲಾ ಸಿಬ್ಬಂದಿ ವರ್ಗದವರು ಶ್ರದ್ಧಾಭಕ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶ್ಲಾಘನೀಯ ವ್ಯಕ್ತಪಡಿಸಿದರು. ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ ಎನ್ ಮಂಜುನಾಥ್ ಅವರ ಸಾರಥ್ಯದಲ್ಲಿ ಜಯದೇವ ಆಸ್ಪತ್ರೆ ಬಡ ಹೃದ್ರೋಗಿಗಳ ಸಂಜೀವಿನಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರ ಹಾಗೂ ಸಿಎಸ್‌ಆರ್ ನಿಧಿಯಿಂದ ನೀಡುವ ಎಲ್ಲಾ ಸಲಕರಣೆಗಳು ಸದುಪಯೋಗವಾಗುತ್ತಿವೆ. ಆದ್ದರಿಂದ ಡಾ. ಸಿ ಎನ್ ಮಂಜುನಾಥ್ ಅವರ ಕಾರ್ಯವೈಖರಿ ಮೇಲೆ ನನಗೆ ಹಾಗೂ ಸರ್ಕಾರಕ್ಕೆ ಸಂಪೂರ್ಣವಾದ ನಂಬಿಕೆ ಇದೆ.

**DR. C. N. MANJUNATH**
**MD.DM, FICC, FACC,FRCP**
**Professor of Cardiology &**
**Director**

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
**Sri Jayadeva Institute of Cardiovascular Sciences and Research**
(Govt. of Karnataka Run Autonomous Institute)
Bannerghatta Road, Jayanagar 9th Block, Bengaluru – 560 069
Direct line: 080-22977456 Contact No.: 080-22977422/433
Email Id: drcnmanjunath@gmail.com
Website: www.jayadevacardiology.com

Ref: Date:

ಜೊತೆಗೆ ಕಲಬುರಗಿಯಲ್ಲೂ ಹೊಸ ಜಯದೇವ ಆಸ್ಪತ್ರೆ ನಿರ್ಮಾಣಗೊಳ್ಳುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದ ಸುತ್ತಮುತ್ತಲ ಜನರಿಗೆ ವರದಾನವಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಾ. ಸಿ ಎನ್ ಮಂಜುನಾಥ್ ಅವರು ಮಾತನಾಡಿ, ಸರ್ಕಾರ ಹಾಗೂ ಸಿಎಸ್ಆರ್ ನಿಧಿ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ) ಜಯದೇವ ಆಸ್ಪತ್ರೆಯ ಸಂಪರ್ಕ ಸೇತುವೆ ಆಗಿವೆ ಎಂದರು ಹಾಗೂ ಐಸಿಐಸಿಐ ಫೌಂಡೇಶನ್‌ನ ಮುಖ್ಯಸ್ಥರಾದ ವೆಂಕಟೇಶ್ ಬಿ ಕೆ ಹಾಗೂ ಸಂಸ್ಥೆಯ ಆಡಳಿತ ವರ್ಗದವರನ್ನು ಅಭಿನಂದಿಸಿದರು. ಜಯದೇವ ಆಸ್ಪತ್ರೆಯಲ್ಲಿ ಪ್ರತಿದಿನ 800 ರಿಂದ 1000 ಜನರಿಗೆ 2ಡಿ ಎಕೋ ಟೆಸ್ಟ್ ನಡೆಸಲಾಗುತ್ತೆ. ಕಳೆದ ವರ್ಷ ಮೂರು ಲಕ್ಷ ಜನರಿಗೆ 2ಡಿ ಎಕೋ ಟೆಸ್ಟ್ ನಡೆಸಲಾಗಿದ್ದು, ಇದು ಜಾಗತಿಕ ದಾಖಲೆಯಾಗಿದೆ. ಪ್ರತಿದಿನ ಆಸ್ಪತ್ರೆಗೆ ಬರುವ ಹೃದ್ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ದಾನಿಗಳ ನೀಡುವ ಸಲಕರಣೆಗಳು ಸಂಪೂರ್ಣವಾಗಿ ಸದುಪಯೋಗ ಆಗಲಿವೆ. ಬಡ ಹಾಗೂ ನಿರ್ಗತಿಕ ವರ್ಗದ ಹೃದ್ರೋಗಿಗಳಿಗೆ ಕಡಿಮೆ ದರದಲ್ಲಿ ಚಿಕಿತ್ಸೆಯನ್ನು ನೀಡಲು ಸಲಕರಣೆಗಳು ಸಹಕಾರಿ ಆಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಸಿಐಸಿಐ ಫೌಂಡೇಶನ್‌ನ ಮುಖ್ಯಸ್ಥರಾದ ವೆಂಕಟೇಶ್ ಬಿ ಕೆ ಮತ್ತು ಐಸಿಐಸಿಐ ಫೌಂಡೇಶನ್‌ನ ಇತರೆ ಆಡಳಿತ ವರ್ಗದವರು ಉಪಸ್ಥಿತರಿದ್ದರು.

ನಿರ್ದೇಶಕರು

ಡಾ|| ಸಿ.ಎನ್. ಮಂಜುನಾಥ್
ಪ್ರಾಧ್ಯಾಪಕರು, ಹೃದ್ರೋಗ ವಿಭಾಗ ಹಾಗು
ನಿರ್ದೇಶಕರು
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ